ಅಂಗಡಿಗೆ ಹತ್ತಿರದಲ್ಲಿಯೇ ಅವನು ಮೊದಲು ಒಂದು ಚಿಕ್ಕ ಮನೆ ಬಾಡಿಗೆಗೆ ಹಿಡಿದುಕೊಂಡು ತನ್ನ ಸಂಸಾರವನ್ನು ಅಲ್ಲಿ ಸ್ಥಾಪಿಸಿದ್ದ. ಆದರೆ ಅದಕ್ಕೆ ಬಾಡಿಗೆ ಕೊಡುವುದು ಹೆಚ್ಚೆಂದು ಅವನಿಗೆ ಅನ್ನಿಸಿತು. ತನ್ನ ಅಂಗಡಿಯ ಹಿಂದಿನ ಜಾಗದಲ್ಲೇ ಅದಕ್ಕೆ ತಾಗಿಕೊಂಡೇ, ಮಣ್ಣಿನ ಗೋಡೆ ಕಟ್ಟಿ, ಎಲ್ಲಿಂದಲೋ ಮರದ ರೀಪುಗಳನ್ನೂ ಹಳೆಯ ಹಂಚುಗಳನ್ನೂ ತಂದು ಎರಡು ಕೋಣೆಗಳ ಒಂದು ಮನೆ ಕಟ್ಟಿದ. ಅದಕ್ಕಾಗಿ ಅವನು ಪೂರ್ತಿ ಹಣವನ್ನು ಕೊಟ್ಟೇ ತಂದು ಕೆಲಸ ಮುಗಿಸಿದ್ದ. ಇದೆಲ್ಲ ಈಗ ಹಳೆಯ ಕತೆ. ಈಗ ಊರಿನಲ್ಲಿ ಅವನದ್ದು ಒಂದೇ ಮುಸಲಮಾನ ಸಂಸಾರವಲ್ಲ. ಕೆಂಪನೆಯ ಕಂಪನಿ ಬೋರ್ಡ್ ಇರುವ ಚಪ್ಪಲಿ ಅಂಗಡಿಯ ಹಸನಬ್ಬನಿದ್ದಾನೆ. ನ್ಯಾಶನಲ್ ಫೋಟೊ ಸ್ಟುಡಿಯೊದ ಮೆಹಬೂಬನಿದ್ದಾನೆ. ಮಾಂಸ ಮಾರಾಟ ಮಾಡುವ ಅಬ್ದುಲ್ಲನಿದ್ದಾನೆ. ಹಾಗಾಗಿ ಮೂಸನ ಹೆಂಡತಿ ಕುಂಞಲಿಯಮ್ಮಗೆ ಭೇಟಿ ಕೊಡಲು ಊರಿನಲ್ಲಿ ನಾಲ್ಕಾರು ಮನೆಗಳಿವೆ.

ತನ್ನ ಅಂಗಡಿಯಲ್ಲಿ ಗಿರಾಕಿಗಳು ಇಲ್ಲದ ಸಮಯದಲ್ಲಿ ಒಂದು ಸ್ಟೂಲಿನ ಮೇಲೆ ಮೆತ್ತಗೆ ಕೂರುವ ಸುಮಾರು ಐವತ್ತು ವರ್ಷ ವಯಸ್ಸಿನ ಮೂಸನನ್ನು ನೋಡಬೇಕು. ಪಟಾಪಟಿ ಹಸುರು ಲುಂಗಿ, ತೀರ ಸೆಖೆ ಇಲ್ಲದಿದ್ದರೆ ಹಾಕಿಕೊಳ್ಳುವ ತೋಳಿರುವ ಒಂದು ಬನೀನು, ಮೀಸೆಯಿಲ್ಲದ ಚೂಪಾದ ಗಡ್ಡ, ಬೋಳಿಸಿದ ತಲೆ, ದಪ್ಪ ಹುಬ್ಬಿನ ಕೆಳಗೆ ಉರುಟಾದ ಕಣ್ಣುಗಳು, ಚೂಪಾದ ಮೂಗು, ರಟ್ಟೆಗೊಂದು ತಾಯಿತ ತಲೆಗೊಂದು ಮುಂಡಾಸು ಕಟ್ಟಿದರೆ ಥೇಟು ಮಹಾರಾಷ್ಟ್ರದ ಶಿವಾಜಿ ಮಹಾರಾಜನಂತೆ ಕಾಣುತ್ತಾನೆ ಎಂದು ಕಾಲೇಜಿನಲ್ಲಿ ಮಾಸ್ ಕಮ್ಯುನಿಕೇಶನ್ ಕೋರ್ಸು ಮಾಡುತ್ತಿರುವ ಅವನ ಗಿರಾಕಿ ವಿದ್ಯಾರ್ಥಿಗಳು ತಮಾಷೆ ಮಾಡಿದ್ದುಂಟು. ಇತ್ತೀಚೆಗೆ, ಅಂದರೆ ವ್ಯಾಪಾರ ಸ್ವಲ್ಪ ಊರ್ಜಿತಗೊಂಡ ಮೇಲೆ ಜಾರಬಾರದೆಂದು ಮೂಸ ಲುಂಗಿಗೆ ನಾಲ್ಕು ಬೆರಳಗಲದ ಒಂದು ಬೆಲ್ಟನ್ನು ಹಾಕಿರುವುದನ್ನು ಕಾಣಬಹುದು. ಆ ಬೆಲ್ಟಿಗೆ ಒಂದು ಹಣದ ಪಾಕೀಟಿದ್ದು ಅದೇ ಅವನ ಹೊಟ್ಟೆಯ ಮೇಲಿನ ಬೇಂಕ್. ಹಾಗೂ ಅವನೀಗ ಮೂಸನಲ್ಲ, ಮೂಸಬ್ಬನಾಗಿದ್ದಾನೆ.

ಮೂಸಬ್ಬ ಒಳ್ಳೆಯವ. ತನ್ನ ಗಿರಾಕಿಗಳ ಜೊತೆಗೆ ಅವನೆಂದೂ ಘರ್ಷಣೆಗೆ ಇಳಿದವನೇ ಅಲ್ಲ. ನಗುಮುಖದಿಂದ ಅವರಿಗೆ ಬೇಕಾದ ಸಾಮಾನುಗಳನ್ನು ಎತ್ತಿಕೊಡುತ್ತಾ ವಿದ್ಯಾರ್ಥಿಗಳಿಂದ ಹಿಡಿದು ಸಂಸಾರಸ್ಥರ ತನಕ ಆತ್ಮೀಯವಾಗಿ ವ್ಯವಹರಿಸುವ ವ್ಯಕ್ತಿ. ಅದು ಅವನ ಅಂಗಡಿ ಊರ್ಜಿತಕ್ಕೆ ಬರಲು ಅಗತ್ಯವೂ ಹೌದು. ಮೂಸಬ್ಬನ ಜಾಣತನಕ್ಕಿಂತ ಹೆಚ್ಚಾಗಿ ಇನ್ನೊಂದು ಮುಖ್ಯ ಕಾರಣವೂ ಇತ್ತು. ಅದು ಆ ಸುತ್ತಿನಲ್ಲಿ ಇರುವ ಒಂದೇ ಒಂದು ಅಂಗಡಿ. ಆದುದರಿಂದ ಹೆಚ್ಚಿನವರು ಅಗತ್ಯದ ವಸ್ತುಗಳನ್ನು ಕೊಳ್ಳಲು ಊರತನಕ ನಡೆದುಕೊಂಡು ಹೋಗಿ ತರುವುದಕ್ಕಿಂತ ಸನಿಹದಲ್ಲಿರುವ ಮೂಸಬ್ಬನನ್ನೇ ಆಶ್ರಯಿಸುವುದು ಅನುಕೂಲವಾಗಿತ್ತು.

ಅದನ್ನು ಕಂಡು ಊರಿನ ಕೆಲವರಿಗೆ ಮೂಸಬ್ಬನ ಮೇಲೆ ಅಸೂಯೆ ಹುಟ್ಟಿದ್ದು ನಿಜ. ಆದರೆ ಅದರಿಂದ ಮೂಸಬ್ಬ ತಲೆ ಕೆಡಿಸಿಕೊಂಡಿರಲಿಲ್ಲ. ಅವನಿಗೆ ತನ್ನ ಗಿರಾಕಿಗಳು ಕೈ ಬಿಡುವುದಿಲ್ಲವೆಂದು ವಿಶ್ವಾಸವಿತ್ತು. ಮುಂದೆ ಹಾಗಾದದ್ದೂ ನಿಜ. ಹೊಸದಾಗಿ ಬಂದ ವಿದ್ಯಾರ್ಥಿಗಳು, ಪ್ರಾಧ್ಯಾಪಕರು ಅವನ ಅಂಗಡಿಗೆ ಬರುವುದನ್ನು ಬಿಡಲಿಲ್ಲ. ಕಾಲೇಜು ವಿದ್ಯಾರ್ಥಿಗಳು ಬಂದು ಚಾ ಪಡೆದು, ಅಂಗಡಿಗೂ ಮನೆಗೂ ಧಾರಾಳ ನೆರಳು ಕೊಡುತ್ತಿದ್ದ ಮರದ ಹಿಂದೆ ಮರೆಯಲ್ಲಿ ಕೂತು ಸಿಗರೇಟು ಸೇದಲು ಅದೇ ಅನುಕೂಲವಾಗಿತ್ತು.

ಅದು ಅಶ್ವತ್ಥದ ಮರ. ವಿಶಾಲವಾಗಿತ್ತು. ಅದರ ನೆರಳಿನಲ್ಲೇ ಮೂಸಬ್ಬನ ಸೂರು. ಹಾಗಾಗಿ